ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 04 ನೇ ಮಾರ್ಚ್, 2020

ಮಂಗಳೂರಿನಲ್ಲಿ CAA ಮತ್ತು NCR ಪ್ರತಿಭಟನೆ ಬಗ್ಗೆ

ಶ್ರೀ ಐವಾನ್ ಡಿ'ಸೋಜ (ನಾಮನಿರ್ದೇಶನ ಹೊಂದಿದವರು):-

188 (240) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರಿನಲ್ಲಿ ಅಂಂ ಮತ್ತು ಒಅಖ ಪ್ರತಿಭಟನೆಗಾರರ ಮೇಲೆ ಗೋಲಿಬಾರ್‌ನಲ್ಲಿ ಮೃತರಾದವರಿಗೆ ಸರ್ಕಾರ ಪರಿಹಾರ ನೀಡಿದೆಯೇ; 2017-18, 2018-19 ಮತ್ತು 2019-20ರಲ್ಲಿ ರಾಜ್ಯದಲ್ಲಿ ಎಷ್ಟು ಮಂದಿಗೆ ಯಾವ ಯಾವ ಕಾರಣಕ್ಕಾಗಿ ಮೃತರಾದವರಿಗೆ ಪರಿಹಾರ ನೀಡಲಾಗಿದೆ; ಪರಿಹಾರ ನೀಡಿದ ಪಟ್ಟಿ ಸಹಿತ ವಿವರ ನೀಡುವುದು;

(ಆ) ಮಂಗಳೂರಿನಲ್ಲಿ ಪರಿಹಾರ ಘೋಷಿಸಿ ನಂತರ ಅದನ್ನು ನೀಡದಿರಲು ಕಾರಣಗಳೇನು; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಪ್ರತಿಭಟನೆಗಾರರು ಪ್ರತಿಭಟನೆಗೆ ಮುಂದಾದಾಗ ಅವರ ಮೇಲಿನ ಕೇಸುಗಳನ್ನು ಹಿಂದಕ್ಕೆ ಪಡೆದ ಉದಾರಣೆಗಳಿವೆಯೇ; ಇದ್ದರೆ ವಿವರ ನೀಡುವುದು ;

(ಈ) 2018-19, 2019-20ರ ಪ್ರತಿಭಟನೆಯಲ್ಲಿ ಗಾಯಗೊಂಡವರ ಚಿಕಿತ್ಸೆಯ ಹಣವನ್ನು ರಾಜ್ಯ ಸರ್ಕಾರದಿಂದ ನೀಡಲಾಗಿದೆಯೇ; ನೀಡಿದ್ದರೆ ವಿವರ ನೀಡುವುದು; ಮಂಗಳೂರು ಗಲಭೆಯಲ್ಲಿ ಗಾಯಗೊಂಡವರ ಸಂಖ್ಯೆ ಎಷ್ಟು; ಅವರು ಪಾವತಿಸಿದ ಆಸ್ಪತ್ರೆಯ ಚಿಕಿತ್ಸೆ ಬಿಲ್ಲು ಎಷ್ಟು; ವಿವರ ನೀಡುವುದು;

(ಉ) ಮಂಗಳೂರು ಗಲಭೆಯಲ್ಲಿ ಗಾಯಗೊಂಡ ಪೊಲೀಸರ ಸಂಖ್ಯೆ ಎಷ್ಟು; ವಿವರ ನೀಡುವುದು; ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ? (ವಿವರ ನೀಡುವುದು)